ಮಂದಿ ಅನೇಕರು ಈಗ ಪ್ರಿವೆಡ್ಡಿಂಗ್ ಶೂಟ್‌ಗೆ ಬೇಡಿಕೆ ಇಡುತ್ತಿದ್ದಾರೆ. ಹೇಗೆಲ್ಲ ಚಿತ್ರವಿರಬೇಕು ಎನ್ನುವುದರ ಬಗ್ಗೆ ಸಂಪೂರ್ಣ ಪ್ಲಾನ್ ಮಾಡಿಕೊಂಡು ನಮಗೆ ಹೇಳುತ್ತಾರೆ. ನಾವು ಅವರ ಯೋಚನೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವ ಕೆಲಸ ಮಾಡುತ್ತೇವೆ' ಎಂದು ಮಾಹಿತಿ ನೀಡುತ್ತಾರೆ ಉತ್ತರಕನ್ನಡದ ಕುಮಟದಲ್ಲಿ ಛಾಯಾಗ್ರಾಹಕರಾಗಿರುವ ಶ್ರೀಪಾದ ಹೆಗಡೆ.

## ಮದುವೆ ದಿರಿಸು ಹಾಗೂ ಆಭರಣ

ವಿವಾಹ ಎಂದಮೇಲೆ ವಧೂವರರ ಉಡುಗೆ ತೊಡುಗೆ ಬಗ್ಗೆ ವಿಶೇಷ ಆದ್ಯತೆ ನೀಡಲೇಬೇಕು. ಗಮನ ಸೆಳೆವ ಬಣ್ಣ, ರವಿಕೆಯ ಇಂಚಿಂಚಿಗೂ ಎಂಬ್ರಾಯ್ಡರಿ ಖದರು, ಕುಂದನ್ ವಿನ್ಯಾಸಗಳನ್ನು ಹೊದ್ದು ಫಳಫಳಿಸುವ ದಿರಿಸು ಈಗಿನವರ ಖಯಾಲಿ. ಹೆಣ್ಣು ಗಂಡುಗಳಿಬ್ಬರ ದಿರಿಸು ಮ್ಯಾಚ್ ಕೂಡ ಆಗುವಂತೆ ವಿನ್ಯಾಸವಿರುತ್ತದೆ.

ಪ್ರಿವೆಡ್ಡಿಂಗ್ ಶೂಟ್‌ಗೆ, ನಾಂದಿಗೆ, ಮೆಹಂದಿ ಶಾಸ್ತ್ರಕ್ಕೆ, ಧಾರೆಗಾಗಿ ತಾವೇ ಖುದ್ದಾಗಿ ಮುಂದೆನಿಂತು ಕಾಸ್ಟ್ಯೂಮ್ ವಿನ್ಯಾಸ ಮಾಡಿಸಿಕೊಳ್ಳುವವರಿದ್ದಾರೆ. ಮದುವೆ ಎಂದಮೇಲೆ ಲಂಗ ದಾವಣಿಯ ಮೆರುಗು, ರೇಷ್ಮೆ ಸೀರೆಯ ವೈಭವ, ಗೌನ್‌ನ ಆಧುನಿಕ ಚೆಲುವು ಇರಬೇಕು ಎಂದು ಬಯಸುತ್ತಾರೆ. ಇವುಗಳನ್ನು ಸಾಕಾರಗೊಳಿಸಿಕೊಡಲೆಂದೇ ಬೇಕಾದಷ್ಟು ಕಾಸ್ಟ್ಯೂಮ್ ಡಿಸೈನರ್‌ಗಳಿರುತ್ತಾರೆ. ವೆಡ್ಡಿಂಗ್ ವೇರ್ ವಿನ್ಯಾಸದ ಬಗ್ಗೆ ವಿಶೇಷ ಅನುಭವವನ್ನೂ ಅವರು ಹೊಂದಿರುತ್ತಾರೆ.

ಇನ್ನು ಬ್ರೈಡಲ್‌ವೇರ್‌ಗಳು ಹೆಚ್ಚು ಕಡಿಮೆ 25 ಸಾವಿರ ರೂಪಾಯಿಯಿಂದ ಪ್ರಾರಂಭವಾಗುತ್ತವೆ. ಅದ್ದೂರಿ ಎನಿಸಿಕೊಳ್ಳುವ ಈ ಉಡುಪುಗಳನ್ನು ಮದುವೆ ದಿನ ಬಿಟ್ಟು ಬೇರೆ ಸಂದರ್ಭದಲ್ಲಿ ಧರಿಸುವ ಅವಕಾಶಗಳು ಕಡಿಮೆ. ಈಗ ಸಾಕಷ್ಟು ಸಂಸ್ಥೆಗಳು ಈ ವೆಡ್ಡಿಂಗ್ ದಿರಿಸುಗಳನ್ನು ಬಾಡಿಗೆಗೆ ನೀಡುವ ಬ್ಯುಸಿನೆಸ್ ಅನ್ನೂ ಪ್ರಾರಂಭಿಸಿವೆ. ಅವರ ಸಹಾಯ ಪಡೆಯಬಹುದು.



ರಶ್ಮಿ ಅನೂಪ್ ರಾವ್

ಆಯಾ ದಿರಿಸಿಗೆ ಸರಿಹೊಂದುವಂಥ ಆಕ್ಸೆಸರೀಸ್ ಬೇಕು. ಧರಿಸುವ ಆಕ್ಸೆಸರೀಸ್‌ಗಳು ಮ್ಯಾಚಿಂಗ್‌ನದ್ದೇ ಆಗಿರಬೇಕು. ಈಗ ಎಲ್ಲ ಕಡೆ ಆಭರಣಗಳನ್ನು ಬಾಡಿಗೆಗೆ ನೀಡುವವರಿದ್ದಾರೆ. ಹೀಗಾಗಿ ಚಿನ್ನದ ಬಗ್ಗೆ ವಿಶೇಷ ಆಸ್ಥೆ ಇಲ್ಲದವರು ಅಥವಾ ಚಿನ್ನಕ್ಕಾಗಿ ದುಬಾರಿ ಮೊತ್ತದ ಹಣವನ್ನು ಖರ್ಚು ಮಾಡಲು ಸಾಧ್ಯವಿಲ್ಲದೇ ಇರುವವರು ಒಂದೊಂದು ದಿರಿಸಿಗೂ ಸರಿಹೊಂದುವಂಥ ಆಭರಣವನ್ನು ಬಾಡಿಗೆ ಪಡೆಯಬಹುದು. ಅದೂ ಅಲ್ಲದೆ ಇಂದಿಗೆ ಮಾರುಕಟ್ಟೆಯಲ್ಲಿ ಸಿಗುವ ಒನ್ ಗ್ರಾಂ ಗೋಲ್ಡ್ ಆಭರಣಗಳು ಚಿನ್ನದ ಆಭರಣಕ್ಕೆ ಸೆಡ್ಡು ಹೊಡೆಯುವಷ್ಟರ ಮಟ್ಟಿಗೆ ಆಕರ್ಷಕವಾಗಿರುತ್ತವೆ.

ವಿವಿಧ ಸಂಸ್ಕೃತಿಯ ಉಡುಗೆ ತೊಡುಗೆಗಳನ್ನು ಫ್ಯೂಸ್ ಮಾಡುವ ಬಗ್ಗೆ ಇಂದಿನ ಜನ ಆಸಕ್ತಿ ವಹಿಸುತ್ತಿದ್ದಾರೆ. ದಿರಿಸು ಹೇಗೆ ತೊಡುತ್ತೀರಿ ಎನ್ನುವುದರ ಮೇಲೂ ಗ್ರ್ಯಾಂಡ್ ಲುಕ್ ಸಿಗುತ್ತದೆ ಎನ್ನುತ್ತಾರೆ ಸೆಲೆಬ್ರಿಟಿ ಕಾಸ್ಟ್ಯೂಮ್ ಡಿಸೈನರ್ ಆಗಿರುವ ರಶ್ಮಿ ಅನೂಪ್ ರಾವ್, 'ಬಟ್ಟೆ ಎಂದರೆ ಅದು ಭಾವನೆಗಳಿಗೆ ಸಂಬಂಧಿಸಿದ್ದು. ಒಬ್ಬ ವಸ್ತ್ರ ವಿನ್ಯಾಸಕ ಬಣ್ಣ, ವಿನ್ಯಾಸಗಳಷ್ಟೇ ಅಲ್ಲ ಭಾವನೆಗಳ ಜೊತೆಗೂ ಕೆಲಸ ಮಾಡುತ್ತಿರುತ್ತಾನೆ. ಹೀಗಾಗಿ ಎಷ್ಟು ಬ್ಯುಸಿನೆಸ್ ಕೊಡುವ ಕಸ್ಟಮರ್ ನಮ್ಮ ಅಂಗಡಿಗೆ ಬರುತ್ತಾರೆ ಎನ್ನುವುದು ನಮಗೆ ಮುಖ್ಯವಾಗುವುದೇ ಇಲ್ಲ. ಪರ್ಫೆಕ್ಟ್ ಆದ ಫಿಟಿಂಗ್ ಮಾಡಿಕೊಡಬೇಕು ಎನ್ನುವುದಷ್ಟೇ ನಮ್ಮ ಮನಸ್ಸಿನಲ್ಲಿರುತ್ತದೆ. ಅನೇಕರು ಮದುವೆ ಸೀರೆ ತುಂಬಾ ಗ್ರ್ಯಾಂಡ್ ಆಗಿರುವ ಚಿನ್ನದ ಎಳೆಗಳಿಂದ ತಯಾರಿಸಿದ್ದನ್ನು ಖರೀದಿಸುತ್ತಾರೆ. ಇವುಗಳ ರವಿಕೆಯನ್ನೂ ಅಷ್ಟೇ ಗ್ರ್ಯಾಂಡ್ ಆಗಿ ಮಾಡಿಸುತ್ತಾರೆ. ಇನ್ನು ರವಿಕೆ ಸರಳವಾಗಿದ್ದಾಗ ಸೀರೆ ಇನ್ನಷ್ಟು ಚೆನ್ನಾಗಿ ಕಾಣುವುದಿದೆ. ಈ ಪ್ರಯೋಗಕ್ಕೆ ಅನೇಕರು ಒಗ್ಗಿಕೊಳ್ಳುತ್ತಾರೆ. ಇನ್ನೂ ಅನೇಕ ಸಲ ಸೀರೆಯನ್ನು ಯಾವ ಶೈಲಿಯಲ್ಲಿ ಉಟ್ಟರೆ ಉತ್ತಮ ಲುಕ್ ಸಿಗುತ್ತದೆ ಎಂಬುದನ್ನೂ ನಾವು ಸಲಹೆ ನೀಡುತ್ತೇವೆ. ಲಂಗ ದಾವಣಿ ಇವತ್ತಿನ ಜನಪ್ರಿಯ ಟ್ರೆಂಡ್. ಇಂಡೋ ವೆಸ್ಟರ್ನ್ ಗೌನ್‌ಗಳನ್ನು ಕೂಡಾ ತೊಡುತ್ತಾರೆ. ಶ್ರೀಮಂತ ವಿನ್ಯಾಸವಿದ್ದಷ್ಟೂ ಬೆಲೆ ಹೆಚ್ಚು. ಸರಳ ವಿನ್ಯಾಸಕ್ಕೆ ಬೆಲೆ ಕಡಿಮೆ' ಎನ್ನುತ್ತಾರೆ.



## ಮೇಕಪ್

ಎಂದೂ ಅತಿಯಾದ ಮೇಕಪ್ ಗೋಜಿಗೆ ಹೋಗದವರು ಕೂಡ ಮದುವೆ ದಿನ ಬ್ಯುಟಿಷಿಯನ್‌ಗಳಿಂದ ಮೇಕಪ್